# Third Semester of Three Year LL.B. Degree Examination, June 2011
## CRIMINAL LAW – II
## Criminal Procedure Code, 1973, Juvenile Justice (Care and Protection of Children) Act, 2000 and Probation of Offenders Act, 1958 (Course – III)

Duration : 3 Hours | Max. Marks : 100

**Instructions** : 1. Answer all **five** Questions.
2. **One** essay type and **one** short note question or problem from **each unit** have to be attempted, which is referred as part (a) and (b) in all the units.
3. Figures to the **right** indicate **marks**.
4. Answers should be written **either** in English or Kannada **completely**.

### UNIT – I

Q. No. 1. (a) Explain the procedure of trial before the Court of Sessions. Marks : 15

ಸತ್ರ ನ್ಯಾಯಾಲಯದ ಮುಂದೆ ನಡೆಯುವ ವಿಚಾರಣಾ ಪ್ರಕ್ರಿಯೆಗಳನ್ನು ವಿವರಿಸಿ.

OR/**ಅಥವಾ**

What do you mean by arrest ? Who can arrest ? Explain rights of the person arrested.

ದಸ್ತಗಿರಿ ಎಂದರೇನು? ದಸ್ತಗಿರಿಯನ್ನು ಯಾರು ಮಾಡಬಹುದು? ದಸ್ತಗಿರಿಯಾದ ವ್ಯಕ್ತಿಯ ಹಕ್ಕುಗಳನ್ನು ವಿವರಿಸಿ.

(b) 'A', an accused, is charged with an offence of belonging to a gang of dacoits, operating in Madhya Pradesh. He is arrested in Mumbai. Can he be tried for the offence in the Mumbai Court ? Marks : 5

'ಎ' ಎಂಬಾತನ ಮೇಲೆ ಮಧ್ಯಪ್ರದೇಶದಲ್ಲಿ ಕಾರ್ಯಾಚರಿಸುವ ಡಕಾಯಿತರ ತಂಡಕ್ಕೆ ಸೇರಿದ್ದಾನೆಂಬ ಅಪರಾಧಕ್ಕಾಗಿ ಆರೋಪ ಹೊರಿಸಲಾಗಿದೆ. ಆತನನ್ನು ಮುಂಬೈಯಲ್ಲಿ ಬಂಧಿಸಲಾಯಿತು. ಮುಂಬೈ ನ್ಯಾಯಾಲಯದಲ್ಲಿ ಆತನ ಅಪರಾಧಕ್ಕಾಗಿ ವಿಚಾರಣೆ ನಡೆಸಬಹುದೆ?

OR/**ಅಥವಾ**

A teacher raped his student twice and threatened her not to disclose it to anybody. After three months she complained stomachache to her mother on medical examination it was found that she is pregnant. After that FIR was lodged. Can delay in filing FIR be condoned ? Give reasons.

ಒಬ್ಬ ಶಿಕ್ಷಕನು ತನ್ನ ವಿದ್ಯಾರ್ಥಿನಿಯ ಮೇಲೆ ಎರಡು ಬಾರಿ ಬಲಾತ್ ಸಂಭೋಗ ನಡೆಸಿ ಯಾರಿಗೂ ಈ ವಿಷಯವನ್ನು ಬಹಿರಂಗಪಡಿಸದಂತೆ ಧಮಕಿ ಹಾಕುತ್ತಾನೆ. 3 ತಿಂಗಳಿನ ನಂತರ ಅವಳು ತನ್ನತಾಯಿಯ ಹತ್ತಿರ ಹೊಟ್ಟೆನೋವು ಬರುತ್ತಿದೆಯೆಂದು ದೂರಿಕೊಳ್ಳುತ್ತಾಳೆ ಹಾಗೂ ಆಕೆಯನ್ನು ತದನಂತರ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದಾಗ ಆಕೆಯು ಗರ್ಭಿಣಿಯೆಂದು ಗೊತ್ತಾಗುತ್ತದೆ. ಆನಂತರ ಪ್ರಥಮ ಮಾಹಿತಿ ವರದಿಯನ್ನು ಸಲ್ಲಿಸಲಾಯಿತು. ಪ್ರಥಮ ಮಾಹಿತಿ ವರದಿಯನ್ನು ಸಲ್ಲಿಸಲು ಆದ ವಿಳಂಬವನ್ನು ಮನ್ನಿಸಬಹುದೇ ? ಕಾರಣಗಳನ್ನು ಕೊಡಿ.

## UNIT – II

Q. No. 2. (a) Explain the provisions relating to attachment of property of person absconding ? Marks : 15

ತಲೆ ತಪ್ಪಿಸಿಕೊಂಡಿರುವ ವ್ಯಕ್ತಿಯ ಸ್ವತ್ತಿನ ಜಪ್ತಿಗೆ ಸಂಬಂಧಿಸಿದ ನಿಯಮಗಳನ್ನು ವಿವರಿಸಿ.

OR/**ಅಥವಾ**

Explain the contents of charge. Discuss the consequences in the event of an alteration in a charge.

ಆರೋಪಣೆಯ ಅಂಶಗಳನ್ನು ವಿವರಿಸಿ. ಆರೋಪಣೆಯಲ್ಲಿ ಬದಲಾವಣೆಗಳನ್ನು ಮಾಡಿದರೆ ಆಗುವ ಪರಿಣಾಮಗಳನ್ನು ಚರ್ಚಿಸಿರಿ.

(b) Mr. X commits a defamation of Mr. Y, a Yoga Guru. Can a disciple of Mr. Y file a complaint for the defarmation ? Decide with reasons. Marks : 5

ಯೋಗ ಗುರು 'Y' ಎಂಬಾತನ ಮೇಲೆ 'X' ಎಂಬಾತನು ಮಾನಹಾನಿ ಕೃತ್ಯವನ್ನು ಎಸಗುತ್ತಾನೆ. 'Y' ಯ ಶಿಷ್ಯನು 'X' ನ ಮೇಲೆ ಈ ಮಾನಹಾನಿಗಾಗಿ ಪಿರ್ಯಾದು ಮಾಡಬಹುದೆ ? ಕಾರಣಗಳೊಡನೆ ನಿರ್ಣಯಿಸಿ.

OR/**ಅಥವಾ**

Mr. 'A' has committed four offences of embezzlement within a period of one year. Can he be tried for all offences at one trial ?

'ಎ' ಎಂಬಾತನು ಒಂದು ವರ್ಷದ ಕಾಲಾವಧಿಯಲ್ಲಿ 4 ಬಾರಿ ಹಣದುರುಪಯೋಗದ ಅಪರಾಧವನ್ನು ಎಸಗಿದ್ದಾನೆ. ಈ ಎಲ್ಲಾ ಅಪರಾಧಗಳಿಗಾಗಿ ಆತನನ್ನು ಒಂದೇ ವಿಚಾರಣೆಗೆ ಒಳಪಡಿಸಬಹುದೇ ?

## UNIT – III

Q. No. 3. (a) Explain the manner in which a judgement is to be delivered and what a judgement should contain ? Marks : 15

ಯಾವ ರೀತಿಯಲ್ಲಿ ತೀರ್ಪನ್ನು ಕೊಡಬೇಕು ಮತ್ತು ಅದು ಏನನ್ನು ಒಳಗೊಂಡಿರಬೇಕು ? ಎಂಬುದನ್ನು ವಿವರಿಸಿ.

OR/**ಅಥವಾ**

"A person who has been tried for an offence and convicted or acquitted shall not be liable to be tried for the same offence" explain

''ಒಬ್ಬ ವ್ಯಕ್ತಿಯು ಒಂದು ಅಪರಾಧಕ್ಕಾಗಿ ವಿಚಾರಣೆಗೆ ಒಳಪಟ್ಟು, ಶಿಕ್ಷಿಸಲ್ಪಟ್ಟು ಅಥವಾ ದೋಷಮುಕ್ತನಾದಲ್ಲಿ ಪುನಃ ಅದೇ ಅಪರಾಧಕ್ಕಾಗಿ ವಿಚಾರಣೆಗೆ ಬಾಧ್ಯನಾಗುವುದಿಲ್ಲ''.

(b) A and B were convicted for criminal breach of trust and sentenced for one year's rigorous imprisonment and a fine of Rs. 1,000/- Both A and B filed an appeal in the High court. B died pending appeal. Subsequently the High court passed an order on A's appeal, reversing his conviction. There after one of B's relatives applied to the High court to set a side the conviction of 'B' and order the fine be refunded. How such an application should be decided by the court ? Marks : 5

'ಅ' ಮತ್ತು 'ಬ' ನ್ನು ಅಪರಾಧಿಕ ನಂಬಿಕೆ ದ್ರೋಹಕ್ಕೆ ನ್ಯಾಯಾಲಯವು ಒಂದು ವರ್ಷ ಕಠಿಣ ಶಿಕ್ಷೆ ಮತ್ತು ರೂ. 1000/– ದಂಡವನ್ನು ವಿಧಿಸುತ್ತದೆ. ಅವರು ಉಚ್ಚನ್ಯಾಯಾಲಕ್ಕೆ ಮೇಲ್ಮನವಿ ಸಲ್ಲಿಸುತ್ತಾರೆ. ಮೇಲ್ಮನವಿ ಇತ್ಯರ್ಥವಾಗದಿರುವ ಸಮಯದಲ್ಲಿ 'ಬ' ನು ಮರಣಿಸುತ್ತಾನೆ. ಆ ನಂತರ ಉಚ್ಚನ್ಯಾಯಾಲಯವು 'ಅ' ನ ಮೇಲ್ಮನವಿ ಮೇಲೆ ಆದೇಶವನ್ನು ಹೊರಡಿಸಿ ನಿರಪರಾಧಿ ಯೆಂದು ನಿರ್ಣಯಿಸುತ್ತದೆ. ತಕ್ಷಣ 'ಬ' ನ ಒಬ್ಬ ಬಂಧು ಉಚ್ಚನ್ಯಾಯಾಲಯಕ್ಕೆ ಅರ್ಜಿಯನ್ನು ಹಾಕಿ 'ಬ' ಶಿಕ್ಷೆಯನ್ನು ರದ್ದುಗೊಳಿಸಿ ದಂಡವನ್ನು ಮರುಪಾವತಿಸಲು ಕೋರುತ್ತಾರೆ. ಈ ಅರ್ಜಿಯನ್ನು ನ್ಯಾಯಾಲಯವು ಹೇಗೆ ತೀರ್ಮಾನಿಸುತ್ತದೆ ?

OR/**ಅಥವಾ**

'W' obtained order for payment of maintenance from the court of magistrate at Delhi against 'H'. After that 'H' came and settled at Hubli. One magistrate passed execution of the order of maintenance at Hubli. Is it valid ? Give reasons.

'H' ವಿರುದ್ಧ 'W' ದೆಹಲಿ ಮ್ಯಾಜಿಸ್ಟ್ರೇಟರ ನ್ಯಾಯಾಲಯದಲ್ಲಿ ಜೀವನಾಂಶದ ಆದೇಶವನ್ನು ಪಡೆಯುತ್ತಾಳೆ. ಆಮೇಲೆ 'H'ನು ಹುಬ್ಬಳ್ಳಿಗೆ ಬಂದು ನೆಲೆಸುತ್ತಾನೆ. ಮ್ಯಾಜಿಸ್ಟ್ರೇಟರು ಹುಬ್ಬಳ್ಳಿಯಲ್ಲಿ ಆ ಆದೇಶವನ್ನು ಜಾರಿ ಮಾಡಲು ಆದೇಶಿಸುತ್ತಾರೆ. ಈ ಆದೇಶವು ಊರ್ಜಿತವೇ ? ಕಾರಣಗಳನ್ನು ಕೊಡಿ.

## UNIT – IV

Q. No. 4. (a) Discuss the rules relating to time limitation for taking cognizance of certain offences. Marks : 15

ಕೆಲವು ಅಪರಾಧಗಳನ್ನು ವಿಚಾರಣೆ ಮಾಡುವ ಅಧಿಕಾರದ ಮೇಲೆ ಇರುವ ಕಾಲಮಿತಿಯ ಬಗ್ಗೆ ಸಂಬಂಧಿಸಿದ ನಿಯಮಗಳನ್ನು ಚರ್ಚಿಸಿರಿ.

OR/**ಅಥವಾ**

Explain the provisions relating to compounding of offences.

ಅಪರಾಧಗಳನ್ನು ರಾಜಿ ಮಾಡಿಕೊಳ್ಳುವ ಬಗ್ಗೆಯಿರುವ ನಿಯಮಗಳನ್ನು ವಿವರಿಸಿ.

(b) Execution of sentence of death. Marks : 5

ಮರಣದಂಡನೆಯನ್ನು ಜಾರಿಮಾಡುವುದು.

OR/**ಅಥವಾ**

Warrant for Levy of fine.

ಜುಲ್ಮಾನೆಯ ವಸೂಲಿಗೆ ವಾರಂಟು.

## UNIT – V

Q. No. 5. (a) Explain the schemes available for rehabilitation and social reintegration of Children under Juvenile Justice (Care and Protection of Children) Act, 2000. Marks : 15

ಮಕ್ಕಳ ಪುನರ್ವಸತಿ ಮತ್ತು ಸಮಾಜದ ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ 2000 ರ ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ಸಂರಕ್ಷಣೆ) ಅಧಿನಿಯಮದಲ್ಲಿರುವ ಯೋಜನೆಗಳನ್ನು ವಿವರಿಸಿ.

OR/**ಅಥವಾ**

Discuss the constitution and powers of Juvenile Justice Board.

ಬಾಲನ್ಯಾಯ ಮಂಡಳಿಯ ರಚನೆ ಮತ್ತು ಅಧಿಕಾರವನ್ನು ಚರ್ಚಿಸಿರಿ.

(b) Power of court to release certain offenders on probation for good conduct. Marks : 5

ಅಪರಾಧಿಗಳನ್ನು ಸನ್ನಡತೆಯ ಪರಿವೀಕ್ಷಣೆಯ ಮೇಲೆ ಬಿಡುಗಡೆ ಮಾಡುವ ನ್ಯಾಯಾಲಯದ ಅಧಿಕಾರ.

OR/**ಅಥವಾ**

Child in need of care and protection.

ಪಾಲನೆ ಮತ್ತು ಸಂರಕ್ಷಣೆ ಅಗತ್ಯವಿರುವ ಮಗು.

---